ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 760

ಸದಸ್ಯರ ಹೆಸರು : ಡಾ.ಜೈಮಾಲ ರಾಮಚಂದ್ರ

ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 10-3-2020

*****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತರು ಬೆಳೆದ ಹಣ್ಣು,ಹೂವು, ತರಕಾರಿಗಳೂ ಮತ್ತು ಇತರೆ ಕೃಷಿ ಉತ್ಪನ್ನಗಳನ್ನು ಕೆಡದಂತೆ ಕಾಪಾಡಲು ಎಷ್ಟು ಸಂಸ್ಕರಣಾ ಘಟಕಗಳು ಹಾಗೂ ಉಗ್ರಾಣಗಳನ್ನು ಸರ್ಕಾರದ ವತಿಯಿಂದ ಸ್ಥಾಪಿಸಲಾಗಿದೆ.	ರಾಜ್ಯದಲ್ಲಿ ರೈತರು ಬೆಳೆದ ಹಣ್ಣು, ಹೂವು, ತರಕಾರಿಗಳೂ ಮತ್ತು ಇತರೆ ಉತ್ಪನ್ನಗಳನ್ನು ಕೆಡದಂತೆ ಕಾಪಾಡಲು ತೋಟಗಾರಿಕೆ ಇಲಾಖೆ ವತಿಯಿಂದ ಸಹಾಯಧನ ನೀಡಿ ಒಟ್ಟು 156 ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ ಹಾಗೂ ತೋಟಗಾರಿಕೆ ಉತ್ಪನ್ನಗಳನ್ನು ಸಂಗ್ರಹಿಸಲು · ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಒಟ್ಟು 133 ತೋಟಗಾರಿಕೆ ಶೀತಲ ಉಗ್ರಾಣಗಳನ್ನು ಸ್ಥಾಪಿಸಲಾಗಿದೆ.
ಆ)	ಪ್ರಸ್ತುತ ಯಾವ ಯಾವ ಜಿಲ್ಲೆಗಳಲ್ಲಿ ರೈತರು ಅತಿ ಹೆಚ್ಚು ಹೂವು, ಹಣ್ಣು, ತರಕಾರಿ ಸೇರಿದಂತೆ ಕೃಷಿ ಉತ್ಪನ್ನಗಳನ್ನು ಬೆಳೆದು, ಕೆಡದಂತೆ ಕಾಪಾಡಲು ಸಂಸ್ಕರಣಾ ಕೋಲ್ಡ್ ಸ್ಟೋರೇಜ್ ಘಟಕ ಇಲ್ಲದೇ, ತಮ್ಮ ಬೆಳೆಗಳಿಗೆ ತಕ್ಕ ಬೆಲೆ ದೊರಕದೇ ನಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಕೋಲಾರ, ಬಾಗಲಕೋಟೆ, ಗದಗ, ಧಾರವಾಡ, ವಿಜಯಪುರ, ಬೆಳಗಾವಿ, ಚಿಕ್ಕಬಳ್ಳಾಪುರ, ಹಾಸನ, ತುಮಕೂರು ಮತ್ತು ಇತರೆ ಜಿಲ್ಲೆಗಳಲ್ಲಿ ಮಾವು, ಟೋಮೆಟೊ, ತೆಂಗು, ಈರುಳ್ಳಿ ಮತ್ತು ಇತರೆ ಬೆಳೆಗಳಿಗೆ ತಕ್ಕ ಬೆಲೆ ದೊರಕದೇ ನಷ್ಟಕ್ಕೀಡಾಗಿರುವುದು ಗಮನಕ್ಕೆ ಬಂದಿದೆ.
ಇ)	ಇಂತಹ ಘಟಕಗಳಿಲ್ಲದ ಸ್ಥಳಗಳಲ್ಲಿ ಸಂಸ್ಕರಣಾ ಕೋಲ್ಡ್ ಸ್ಟೋರೇಜ್ ಘಟಕ ಹಾಗೂ ಉಗ್ರಾಣಗಳನ್ನು ಸ್ಥಾಪಿಸಲು ಸರ್ಕಾರದ ಕ್ರಮವೇನು?	ಸಂಸ್ಕರಣಾ ಕೋಲ್ಡ್ ಸ್ಟೋರೇಜ್ ಘಟಕಗಳನ್ನು ಸ್ಥಾಪಿಸುವ ಆಸಕ್ತ ಖಾಸಗಿ ವಲಯದವರಿಗೆ ಸರ್ಕಾರದ ವತಿಯಿಂದ ಶೇ.35 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

HORTI 82 HGM 2020

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು